# ಬೆಳ್ಳುಳ್ಳಿ

ಅನಂತ ರಮೇಶ್
ಕಲೆ: ಸಂತೋಷ್ ಸಸಿಹಿತ್ಲು



ಬಂತು ಬಂತು
ಪುಟಾಣಿ ಚೆಂಡು
ಬಿಳಿಬಿಳಿ ಹೊಳೆವ ಬೆಳ್ಳುಳ್ಳಿ

ಬೆಳ್ಳಿ ಬಣ್ಣ
ಅಂಗಿ ಚಲ್ಲಣ
ಬೆನ್ನು ಬಗ್ಗಿದ ಬೆಳ್ಳುಳ್ಳಿ

ನೀರೇ ಇಲ್ಲದ
ಮೋಡದ ಹಾಗೆ
ಮನೆಗೇ ಬಂತು ಬೆಳ್ಳುಳ್ಳಿ

ಹತ್ತಿ ಗಿಡದಲಿ
ಅರಳೆಯ ಹಾಗೆ
ಒಳಗೇ ಬಂತು ಬೆಳ್ಳುಳ್ಳಿ

ಅಡುಗೆ ಮನೆಗೆ
ಬಿಡು ಬಿಡು ಎಂದು
ನುಗ್ಗಿಯೆಬಿಟ್ಟಿತು ಬೆಳ್ಳುಳ್ಳಿ

ಕುದಿಯುವ ಸಾರಲಿ
ಈಜುವೆನೆಂದು
ಅಂಗಿ ಕಳಚಿತು ಬೆಳ್ಳುಳ್ಳಿ

ಹಸಿ ರುಚಿ ಕಳಚಿ
ಹೊಸ ರುಚಿಯಾಗಲು
ಧುಮುಕಿತು ಸಾರಿಗೆ ಬೆಳ್ಳುಳ್ಳಿ

ಕೊತಕೊತ ಕುದಿಯಲಿ
ಘಮ ಘಮ ಘಮ
ಪರಿಮಳವಾಯ್ತು ಬೆಳ್ಳುಳ್ಳಿ

## ಕುಂಚ ಪ್ರಪಂಚ

ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಎಳೆಯರು ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.

**ವಿಳಾಸ:** editorsu@sudha.co.in








**ಮನಸ್ವಿನಿ ಎಸ್‌. ಶಿಗ್ಗಾಂವ್**
5ನೇ ತರಗತಿ, ಬೆಥೆಸ್ಡಾ ಅಂತರರಾಷ್ಟ್ರೀಯ ಶಾಲೆ, ಬೆಂಗಳೂರು



**ಹಿಮಾನಿ ಆರ್‌.**
7ನೇ ತರಗತಿ, ಪೂರ್ಣಪ್ರಜ್ಞ ಶಿಕ್ಷಣ ಕೇಂದ್ರ, ಭದ್ರಾವತಿ